<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಭ್ರಷ್ಟಾಚಾರ ನಿಗ್ರಹ ಪ್ರಕರಣಗಳ ಅಧಿವಿಚಾರಣ ವಿಶೇಷ ನ್ಯಾಯಾಲಯ, ಕೋಲಾರ</u>

**Spl. C. (P.C.) 09/2014**

ಪ್ರಾಸಾಃ **18** ಚಾಸಾಃ **47**
ದಿನಾಂಕಃ **09-04-2026**

| | | |
|---|---|---|
| ಹೆಸರು | :: | ವಿ. ಶಿವಣ್ಣ |
| ತಂದೆಯ ಹೆಸರು | :: | ವೆಂಕಟಸ್ವಾಮಿ |
| ವಯಸ್ಸು | :: | 53 ವರ್ಷ |
| ಉದ್ಯೋಗ | :: | ಅಡುಗೆ ಕೆಲಸ |
| ವಾಸ ಸ್ಥಳ | :: | ವೇಮಗಲ್ |

<u>ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಗಕರಿಂದಃ</u>

1. ನಾನು 1997 ರಿಂದ 2014 ವರೆಗೆ ಅಡುಗೆ ಸಹಾಯಕನಾಗಿ ವೇಮಗಲ್ ಸರ್ಕಾರಿ ಪದವಿ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಸೇವೆ ಸಲ್ಲಿಸುತ್ತಿದ್ದೆ. 2014 ರಿಂದ ಅಡುಗೆ ಮಾಡುವವನಾಗಿ ಅದೇ ವಿದ್ಯಾರ್ಥಿ ನಿಲಯದಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ನಾನು ದಿನಗೂಲಿ ನೌಕರನಾಗಿ ಅಲ್ಲಿ ಕೆಲಸ ಮಾಡುತ್ತಿದ್ದೇನೆ. 2012-13 ರಲ್ಲಿ ಸದರಿ ಹಾಸ್ಟೆಲ್ ನ ವಾರ್ಡನ್ ಆಗಿ ಬಾಲಚಂದ್ರ ಇವರು ಇದ್ದರು. 2011-12 ನೇ ಸಾಲಿನಲ್ಲಿ ನನಗೆ ತಿಂಗಳಿಗೆ ರೂ.6,951/- ಕೊಡುತ್ತಿದ್ದರು. ಸಂಬಳ 2-3 ತಿಂಗಳಿಗೆ ಒಂದು ಬಾರಿ ಕೊಡುತ್ತಿದ್ದರು. ಸಂಬಳವನ್ನು ಚೆಕ್ ಮೂಲಕ ಕೊಡುತ್ತಿದ್ದರು. ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯ ಕಛೇರಿಗೆ ಬಂದು ರಿಜಿಸ್ಟರ್ ಗೆ ಸಹಿ ಮಾಡಿ ಚೆಕ್ಕನ್ನು ಪಡೆದುಕೊಂಡು ಹೋಗುತ್ತಿದ್ದೆ.

2. 2011 ರಿಂದ 2013 ರ ಅವಧಿಯಲ್ಲಿ ಸದರಿ ನಮ್ಮ ಹಾಸ್ಟೆಲ್ ನಲ್ಲಿ ಎಸ್.ನಾಗರಾಜ್ ಮತ್ತು ಕೃಷ್ಣಪ್ಪ ಇವರು ಅಡುಗೆಯವರಾಗಿ ಹಾಗೂ ಕಾಂತರಾಜು, ಕೃಷ್ಣವೇಣಿ, ನಾನು ಮತ್ತು ನಾರಾಯಣಮ್ಮ ಅಡುಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದೆವು. 2013 ರಲ್ಲಿ ಲೋಕಾಯುಕ್ತ ಕಛೇರಿಗೆ ನನ್ನನ್ನು ಕರೆಸಿದ್ದರು. ಆಗ ತನಿಖಾಧಿಕಾರಿಯವರು ಈಗ ತೋರಿಸಿದ ದಾಖಲೆಯನ್ನು ತೋರಿಸಿದರು. ಸಾಕ್ಷಿಗೆ ತೋರಿಸಿದ ದಾಖಲೆ ನಿ ಪಿ 519 ರಲ್ಲಿನ ಹಣ ಸಂದಾಯ ರಸೀದಿ ಎಂಬ ದಾಖಲೆ ಇದೆ. ಸದರಿ ದಾಖಲೆಯನ್ನು ನಿ ಪಿ 519(ಎ) ಎಂದು

ಗುರುತಿಸಲಾಯಿತು. ಅದರಲ್ಲಿ ಹೇಳಿರುವ ಮುನಿಯಪ್ಪ, ಸುರೇಶ, ಮಂಜುನಾಥ ಕೆ, ಲಕ್ಷ್ಮಣ ಮತ್ತು ಶಾಂತಮ್ಮ ಇವರು ನಮ್ಮ ಹಾಸ್ಟೆಲ್ ನಲ್ಲಿ ಕೆಲಸ ಮಾಡಿಲ್ಲ.

ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಂ.ಹೆಚ್ ವಕೀಲರಿಂದಃ

3. ಲೋಕಾಯುಕ್ತ ಕಛೇರಿಗೆ ನನ್ನನ್ನು ಕರೆಸಿರಲಿಲ್ಲ ಮತ್ತು ಅಲ್ಲಿ ನಿ ಪಿ 519(ಎ) ಇದನ್ನು ನನಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನಾನು 10 ನೇ ತರಗತಿ ಓದಿದ್ದೇನೆ. ಹಾಸ್ಟೆಲ್ ನಲ್ಲಿ ಹಾಜರಾತಿ ಪುಸ್ತಕ ನಿರ್ವಹಿಸಿದ್ದಾರಾ ಎಂದರೆ ಸಾಕ್ಷಿದಾರರು ಹಾಸ್ಟೆಲ್ ನಲ್ಲಿ ನಿರ್ವಹಿಸಿಲ್ಲ ಮತ್ತು ನಾವು ಕೆಲಸ ಮಾಡಿದ ಬಗ್ಗೆ ವಾರ್ಡನ್ ರವರು ದೃಢೀಕರಣ ನೀಡುತ್ತಿದ್ದರು ಎನ್ನುತ್ತಾರೆ. ನನ್ನ ಕೆಲಸದ ಅವಧಿ ಬೆಳಿಗ್ಗೆ 5.00 ರಿಂದ 7.30 ರವರೆಗೆ, ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ಹಾಗೂ ಸಂಜೆ 5.00 ರಿಂದ 7.30 ರವರೆಗೆ ಇತ್ತು. ನಾನು ಆ ಹಾಸ್ಟೆಲ್ ನಲ್ಲಿ ಕೆಲಸನೇ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಪಿ.ಎನ್.ಕೆ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸುತ್ತಾರೆ.

ಪಾಟೀ ಸವಾಲುಃ 5, 6 ಮತ್ತು 7 ನೇ ಆರೋಪಿತರ ಪರ ವಕೀಲರು ತಮ್ಮ ಪರವಾಗಿ ಈ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ, ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.)

ಓ. ಹೇ. ಕೇ. ಸ. ಇದೆ,

(ವಿಜಯಕುಮಾರ್ ಎಂ. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ